**OS No:68/2019**
**PW : 1**

(ಇಂದು ದಿನಾಂಕಃ **27-01-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ವಿ ಪಿ ಪಿ ವಕೀಲರಿಂದಃ**

ನನ್ನ ತಂದೆ ಯಲ್ಲಪ್ಪರವರು ಮೃತಪಟ್ಟು 15 ವರ್ಷ ಆಗಿರುತ್ತದೆ. ನನ್ನ ತಾಯಿ ಮೃತಪಟ್ಟು 10 ವರ್ಷ ಆಗಿರುತ್ತದೆ. ನಮ್ಮ ತಂದೆ ತಾಯಿಗೆ ಒಟ್ಟು 5 ಗಂಡು ಮಕ್ಕಳು ಹಾಗೂ 3 ಹೆಣ್ಣು ಮಕ್ಕಳು ಇದ್ದೇವೆ. ನಮ್ಮಗಳ ಪೈಕಿ ಬಸಪ್ಪ ಮಾತ್ರ ಮೃತಪಟ್ಟಿರುತ್ತಾನೆ. ನನ್ನ ಮದುವೆ ನನಗೆ 7-8 ವರ್ಷ ಇದ್ದಾಗ ಆಗಿರುತ್ತದೆ. ನನಗೆ ಈಗ 65 ವರ್ಷ. ನಾನು, ನನ್ನ ಗಂಡ ಹಾಗೂ ಮಕ್ಕಳು ಸವದತ್ತಿ ತಾಲ್ಲೂಕಿನ ಚುಳಕಿ ಗ್ರಾಮದಲ್ಲಿ ವಾಸವಿದ್ದೇವೆ. ಅಲ್ಲಿ ನಮಗೆ ಮನೆ ಮಾತ್ರ ಇದ್ದು, ಜಮೀನು ಇರುವುದಿಲ್ಲ. ನನ್ನ ತಂದೆ ಜೀವಂತವಿದ್ದಾಗ ನಮ್ಮ ಮನೆತನಕ್ಕೆ ಒಟ್ಟು ಎಷ್ಟು ಆಸ್ತಿಗಳಿವೆ ಎಂದು ದಾಖಲೆಗಳನ್ನು ಪರಿಶೀಲಿಸಿ ನೋಡಿರುವುದಿಲ್ಲ. ನನ್ನ ತಂದೆ-ತಾಯಿ ಮೃತಪಟ್ಟ ನಂತರವೂ ಸಹ ನಾನು ದಾಖಲೆಗಳನ್ನು ಪರಿಶೀಲಿಸಿ ನೋಡಿರುವುದಿಲ್ಲ. ನನ್ನ ತಂದೆ 16 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ಸದರಿ ಜಮೀನಿನ ಸರ್ವೇ ನಂಬರ, ಕ್ಷೇತ್ರ ಹಾಗೂ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನಾನು ಅನಕ್ಷರಸ್ಥೆ. ನನ್ನ ವಾದ ಪತ್ರ ಯಾವ ಭಾಷೆಯಲ್ಲಿದೆ ಎಂದು ಗೊತ್ತಿಲ್ಲ. ವಾದ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಕೀಲರು ಹೇಳಿದ ಮೇರೆಗೆ ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದು, ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 16 ಎಕರೆ ಜಮೀನಿಗೆ ಸಂಬಂಧಿಸಿ ದಾವೆ ಸಲ್ಲಿಸಿದ್ದು ಅವುಗಳ ಸಂಪೂರ್ಣ ವಿವರ ನನಗೆ ಗೊತ್ತಿಲ್ಲ. ಸದರಿ ಜಮೀನು ಒಂದು ಕಡೆ 5 ಎಕರೆ, ಇನ್ನೊಂದು ಕಡೆ 5 ಎಕರೆ ಹಾಗೂ ಮತ್ತೊಂದು ಕಡೆ 1 ಕೂರಿಗೆ ಹಾಗೂ ಇನ್ನೊಂದು ಕಡೆ 2 ಎಕರೆ ಇರುತ್ತದೆ. ಸದರಿ ಜಮೀನುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುವುದಿಲ್ಲ. ಸದರಿ ಜಮೀನು ಹೆಬ್ಬಾಳ, ಅಳಗಾವಾಡಿ ಗ್ರಾಮದಲ್ಲಿದ್ದು, ಆದರೆ ನಿಖರವಾಗಿ ಯಾವ ಗ್ರಾಮದಲ್ಲಿ ಎಷ್ಟು ಜಮೀನು ಇದೆ ಎಂದು ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲದ ಕಾರಣ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**